ವಾಹನದ ಸಂಬಂಧದಲ್ಲಿ ತೆರಿಗೆ ಸಂದಾಯ ಮಾಡಬೇಕಾದ ಹೊಣೆಗಾರಿಕೆಯು ಉಂಟಾದಲ್ಲಿ ಮತ್ತು ಮೋಟಾರು ವಾಹನ ಅಧಿನಿಯಮ ೧೯೮೮ರ ಅಡಿಯಲ್ಲಿ ರಾಜ್ಯದಲ್ಲಿ ಅಂಥ ಮೋಟಾರು ವಾಹನದ ನೋಂದಣಿ ಮಾಡುವುದು ಅಗತ್ಯವಾಗಿದೆಯೋ ಅಥವಾ ಹೊಸ ನೋಂದಣಿ ಗುರುತನ್ನು ಅದರ ಮೇಲೆ ಹಾಕಬೇಕಾಗಿದೆಯೋ, ಅಂಥ ಮೋಟಾರು ವಾಹನವನ್ನು, ಅಂಥ ಮೋಟಾರು ವಾಹನದ ಸಂಬಂಧದಲ್ಲಿ ಅದಕ್ಕೆ ಸಂಬಂಧಿಸಿದ ವ್ಯಕ್ತಿಯಿಂದ ಅಂಥ ತೆರಿಗೆಯನ್ನು ಸಂದಾಯ ಮಾಡಿದ ಹೊರತು, ಯಾವನೆ ನೋಂದಣಿ ಪ್ರಾಧಿಕಾರಿಯು ನೋಂದಣಿ ಮಾಡತಕ್ಕುದಲ್ಲ ಅಥವಾ ಅಂಥ ಮೋಟಾರು ವಾಹನಕ್ಕೆ ಯಾವುದೇ ಹೊಸ ನೋಂದಣಿ ಗುರುತನ್ನು ಹಾಕತಕ್ಕುದಲ್ಲ"

ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆ

ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾಪಗಳನ್ನು ಕಾರ್ಯಗತಗೊಳಿಸಲು ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗಾಗಿ ೧೯೭೫ರ ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಯಿತು.

ಆದುದರಿಂದ ಈ ವಿಧೇಯಕ

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ಹೆಚ್ಚ ತಗಲುವುದಿಲ್ಲ.

ಪ್ರತ್ಯಾಯೋಚಿತ ಶಾಸನ ರಚನಾಧಿಕಾರ ಜ್ಞಾಪನಪತ್ರ

ಖಂಡ-೨ :— ಈ ಖಂಡದ ಮೂಲಕ ಸೇರಿಸಲು ಪ್ರಸ್ತಾವಿಸಲಾದ ೪-ಬಿ ಪ್ರಕರಣದ (೩)ನೇ ಉಪ ಪ್ರಕರಣವು, ಈ ಪ್ರಕರಣದ ಅಡಿಯಲ್ಲಿ ವಿಧಿಸಲಾದ ತೆರಿಗೆಯನ್ನು ಆಮದುಗಾರನು ಸಂದಾಯ ಮಾಡಬೇಕಾದ ರೀತಿ ಮತ್ತು ಅವಧಿಯನ್ನು ಗೊತ್ತುಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರತ್ಯಾಯೋಚಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

ಎಂ. ವೀರಪ್ಪ ಮೊಯಿಲಿ
ಮುಖ್ಯಮಂತ್ರಿಯವರು

ನಿಂ. ಹಂ. ಮುತ್ತಲಗೇರಿ
ಕಾರ್ಯದರ್ಶಿ

ಕರ್ನಾಟಕ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ (ತಿದ್ದುಪಡಿ) ವಿಧೇಯಕ ೧೯೯೩

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ತಿದ್ದುಪಡಿ ವಿಧೇಯಕ ೧೯೯೩ ಅನ್ನು ಹಿಂದಕ್ಕೆ ಪಡೆಯಲು ಅನುಮತಿ ಕೊಡಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ಏನೆಂದರೆ :—"ಕರ್ನಾಟಕ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ (ತಿದ್ದುಪಡಿ) ವಿಧೇಯಕ ೧೯೯೩ ಅನ್ನು ವಾಪಸ್ ಪಡೆಯಲು ಸಭೆ ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ವಾಪಸ್ ಪಡೆಯಲು ಅನುಮತಿ ನೀಡಲಾಯಿತು

(೩) ೧೯೯೪ರ ಕರ್ನಾಟಕ ತೆರಿಗೆ ಕಾನೂನು (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, "೧೯೯೪ರ ಕರ್ನಾಟಕ ತೆರಿಗೆ ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು.—ಪ್ರಸ್ತಾವನೆಯೆಂದರೆ : "೧೯೯೪ರ ಕರ್ನಾಟಕ ತೆರಿಗೆ ಕಾನೂನು ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, "೧೯೯೪ರ ಕರ್ನಾಟಕ ತೆರಿಗೆ ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ (ಅನುಬಂಧ IIIನ್ನು ನೋಡಿ)

೪. ೧೯೯೪ರ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ

ಶ್ರೀ ಎಂ. ವೀರಪ್ಪ ಮೊಯಿಲಿ (ಮಾನ್ಯ ಮುಖ್ಯ ಮಂತ್ರಿಗಳು.—ಮಾನ್ಯ ಅಧ್ಯಕ್ಷರೇ, "೧೯೯೪ರ ಕರ್ನಾಟಕ ಸ್ಟ್ಯಾಂಪ್ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು.—ಪ್ರಸ್ತಾವನೆಯೆಂದರೆ, "೧೯೯೪ರ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, "೧೯೯೪ರ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧIVನ್ನು ನೋಡಿ)

೫. ೧೯೯೪ರ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, "೧೯೯೪ರ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು.—ಪ್ರಸ್ತಾವನೆಯೆಂದರೆ, "೧೯೯೪ರ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, "೧೯೯೪ರ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ V ನ್ನು ನೋಡಿ)